ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-6 Issue 1, July-August, 2024, Pp. 51-54
©*IIMRD*, Mysuru

IIMRD JOURNALS
www.iimrd.com

# ಕುರಿಗಾಹಿ ಮಹಿಳೆಯರ ಸಮಸ್ಯೆ ಮತ್ತು ಸವಾಲುಗಳು: ಒಂದು ಅವಲೋಕನ

**ಡಾ. ನಿಂಗಪ್ಪ**
ಅತಿಥಿ ಉಪನ್ಯಾಸಕರು, ಸಮಾಜಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿಂಧನೂರು.

**ಸಾರಾಂಶ: (Abstract)**

*ಮಾನವ ಮೂಲತಃ ಆಹಾರಕ್ಕಾಗಿ ಅಲೆದಾಡುವ ಪ್ರವೃತ್ತಿಯುಳ್ಳವನು. ಅವನು ಇಂದಿಗೂ ಅರೆ ಅಲೆಮಾರಿಯಾಗಿ ಇರುವುದನ್ನು ಕಾಣುತ್ತೇವೆ. ಕಾರಣ ಯಾವುದೇ ಒಂದು ಸಮೂಹಕ್ಕೆ ನಿಶ್ಚಿತ ನೆಲೆ, ಆರ್ಥಿಕ ಸ್ವಾವಲಂಬನೆ ಮತ್ತು ಸಾಮಾಜಿಕ ಭದ್ರತೆ ಇಲ್ಲವಾದರೆ ಸಹಜವಾಗಿ ಆ ಸಮುದಾಯ ಸಮಾಜದ ಮುಖ್ಯ ವಾಹಿನಿಯಿಂದ ಅಲಕ್ಷಿತ ಸಮುದಾಯವಾಗುತ್ತದೆ. ಅಂತಹ ಸಮುದಾಯಗಳಲ್ಲಿ ಕುರಿಗಾಹಿ ಸಮುದಾಯಗಳು ಕೂಡ ಒಂದು. ಕುರಿಗಾಹಿಗಳು ವಿವಿಧ ಋತುಗಳಲ್ಲಿ ಸಂಸಾರ ಸಮೇತವಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗುತ್ತಾರೆ. ಅಂಥ ಸಂದರ್ಭದಲ್ಲಿ ಕುರಿಗಾಹಿ ಮಹಿಳೆಯರು ಮೂಲಭೂತ ಸೌಕರ್ಯಗಳಿಲ್ಲದೆ ವಿವಿಧ ರೀತಿಯ ಸಮಸ್ಯೆಗಳನ್ನು ಎದುರಿಸಿ ಬದುಕುವುದು ಅನಿವಾರ್ಯವಾಗಿದೆ. ಪ್ರಸ್ತುತ ಲೇಖನದಲ್ಲಿ ಕುರಿಗಾಹಿ ಸಮುದಾಯದ ಮಹಿಳೆಯರು ಎದುರಿಸುವ ಸಮಸ್ಯೆಗಳು ಮತ್ತು ಸವಾಲುಗಳನ್ನು ಅವಲೋಕಿಸಲಾಗಿದೆ.*

**ಮುಖ್ಯಪದಗಳು (Keywords):** ಕುರಿಗಾಹಿ ಸಮುದಾಯ, ಕುರಿಗಾಹಿ ಮಹಿಳೆಯರು, ಋತುಮಾನದ ವಲಸೆ.

## ಪೀಠಿಕೆ

ಮನುಷ್ಯನಿಗೆ ಅವಶ್ಯಕವಾಗಿರುವುದು ರೊಟ್ಟಿ ಬಟ್ಟೆ ಸೂರು ಇವುಗಳಿಗಾಗಿ ಮನುಷ್ಯ ಒಂದೆಡೆಯಿಂದ ಮತ್ತೊಂದೆಡೆಗೆ ವಲಸೆ ಹೋಗುತ್ತಾರೆ. ವಲಸೆಯ ಸಂದರ್ಭದಲ್ಲಿ ಎದುರಾಗುವ ಸಮಸ್ಯೆಗಳು ಸವಾಲುಗಳು ಸಾಮಾನ್ಯವಾಗಿರುತ್ತದೆ. ಅಹಲ್ಯಾಬಾಯಿ ಓಳ್ಕರ್ ದಾನ ಚಿಂತಾಮಣಿ ಕಂಚಿಕಬ್ಬೆ ವಿಜಯನಗರದ ರಾಣಿ ಗಂಗಾಂಬಿಕೆ ಹಂಡೆ ಮನೆತನದ ರಾಣಿ ಅವ್ವಮ್ಮ ವೀರರಾಣಿ, ಬೆಳವಾಡಿ ಮಲ್ಲಮ್ಮ, ಇಟಗಿ ಭೀಮವ್ವ ಸಜ್ಜಲಗುಡ್ಡದ ಶರಣಮ್ಮ, ಚಿಂಚಲಿ ಮಾಯವ್ವ ಇನ್ನು ಹಲವಾರು ಕುರಿಗಾಹಿ ಮಹಿಳೆಯರು ಆಧ್ಯಾತ್ಮಿಕ ಧಾರ್ಮಿಕ ಸಾಂಸ್ಕೃತಿಕ ಕ್ಷೇತ್ರದಲ್ಲಿ ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ.

## ಅಧ್ಯಯನದ ಉದ್ದೇಶಗಳು

1. ಕುರಿಗಾಹಿ ಮಹಿಳೆಯರು ವಲಸೆ ಸಂದರ್ಭದಲ್ಲಿ ಎದರುಸುವ ಸಮಸ್ಯೆಗಳನ್ನು ತಿಳಿದುಕೊಳ್ಳುವುದು.
2. ಕುರಿಗಾಹಿ ಮಹಿಳೆಯರ ಅಭಿವೃದ್ಧಿಗೆ ಸಲಹೆಗಳನ್ನು ನೀಡುವುದು.

*Please cite this article as:* ನಿಂಗಪ್ಪ (2024). ಕುರಿಗಾಹಿ ಮಹಿಳೆಯರ ಸಮಸ್ಯೆ ಮತ್ತು ಸವಾಲುಗಳು: ಒಂದು ಅವಲೋಕನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 6(1). ಪು.ಸಂ.* 51–54

**ಅಧ್ಯಯನದ ಮಹತ್ವ**

1. ಕುರಿಗಾಹಿ ಮಹಿಳೆಯರು ಎದುರಿಸುವ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುತ್ತದೆ.
2. ಕುರಿಗಾಹಿ ಮಹಿಳೆಯರ ಅಭಿವೃದ್ಧಿಗೆ ಯೋಜನೆ ರೂಪಿಸಲು ಅನುಕೂಲವಾಗುತ್ತದೆ.

**ಅಧ್ಯಯನ ಕ್ಷೇತ್ರ**

ಹೈದರಾಬಾದ್ ಕರ್ನಾಟಕವು 7 ಜಿಲ್ಲೆಗಳಲ್ಲಿ ಒಂದಾದ ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನಲ್ಲಿ ಲಭ್ಯವಿರುವ ಕುರಿಗಾಹಿ ಕುಟುಂಬಗಳನ್ನು ಅಧ್ಯಯನಕ್ಕೊಳಪಡಿಸಲಾಗಿದೆ.

**ಮಾದರಿ ವಿಧಾನ**

ಪ್ರಸ್ತುತ ಈ ಲೇಖನಕ್ಕೆ ಉದ್ದೇಶಪೂರ್ವಕ ನಮೂನೆ ಮಾದರಿಯನ್ನು ಅನ್ವಯಿಸಿಕೊಂಡು 50 ಕುರಿಗಾಹಿ ಮಹಿಳೆಯರನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ.

**ಸಂಶೋಧನಾ ಸಾಧನಗಳು**

ಈ ಅಧ್ಯಯನಕ್ಕೆ ಪ್ರಾಥಮಿಕ ಮತ್ತು ಮಾಧ್ಯಮಿಕ ಮೂಲಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ. ಈ ಸಮಾಜಶಾಸ್ತ್ರೀಯ ಸಂಶೋಧನಾ ವಿಧಾನಗಳನ್ನು ಬಳಸಿಕೊಂಡು ಪ್ರಾಥಮಿಕ ಮಾಹಿತಿ ಸಂಗ್ರಹಿಸಲಾಗಿದೆ. ಮಾಧ್ಯಮಿಕ ಮಾಹಿತಿಯನ್ನು ಅಂತರ್ಜಾಲ, ಸಂಶೋಧನಾ ಗ್ರಂಥಗಳು, ಲೇಖನಗಳು ಮುಂತಾದ ಮೂಲಗಳಿಂದ ಸಂಗ್ರಹಿಸಲಾಗಿದೆ.

**ಕೋಷ್ಟಕ 01: ಕುರಿಗಾಹಿ ಮಹಿಳೆಯರ ಸಮಸ್ಯೆಗಳ ವಿವರ (ಶೇಕಡಗಳಲ್ಲಿ) N=50**

| ವಿವರ | ಹೌದು | ಇಲ್ಲ |
|---|---|---|
| ವಲಸಯಿಂದ ಮಕ್ಕಳು ಪಾಲನೆ ಪೋಷಣೆಯಿಂದ ವಂಚಿತರಾಗುತ್ತಾರೆಯೇ? | 80 | 20 |
| ದಿನನಿತ್ಯದ ಚಟುವಟಿಕೆಯಿಂದ ನಿಮಗೆ ತೃಪ್ತಿ ಇದೆಯೇ? | 50 | 50 |
| ವಲಸೆ ಸಂದರ್ಭದಲ್ಲಿ ಆಹಾರ ಸಮಸ್ಯೆಗಳನ್ನು ಎದುರಿಸುತ್ತೀರಾ? | 70 | 30 |
| ವಲಸೆ ಸಂದರ್ಭದಲ್ಲಿ ನೈಸರ್ಗಿಕ ವಿಕೋಪದಿಂದ ನಿಮ್ಮ ಕುಟುಂಬದ ಸದಸ್ಯರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆಯೇ? | 40 | 60 |
| ರಾತ್ರಿ ವೇಳೆಯಲ್ಲಿ ಕ್ರೂರ ಪ್ರಾಣಿಗಳಿಂದ ಸಮಸ್ಯೆ ಎದುರಾಗಿದೆಯೇ? | 90 | 10 |
| ನೀವು ಪಿತ್ರಾಜಿತ ಆಸ್ತಿಯಲ್ಲಿ ಪಾಲುದಾರರಾಗಿದ್ದೀರಾ? | 6 | 94 |
| ಮಕ್ಕಳನ್ನು ವಿದ್ಯಾವಂತರನ್ನಾಗಿಸುವ ಬಯಕೆ ನಿಮಗಿದೆಯೇ | 76 | 24 |

**ಮೂಲ:** ಕ್ಷೇತ್ರಕಾರ್ಯ

ಕೋಷ್ಟಕ 01 ರಲ್ಲಿ ಕುರಿಗಾಹಿ ಮಹಿಳೆಯರ ಸಮಸ್ಯೆಗಳ ವಿವರವನ್ನು ನೀಡಲಾಗಿದೆ. ಕೋಷ್ಟಕದ ಪ್ರಕಾರ ಶೇ.80ರಷ್ಟು ಕುರಿಗಾಹಿ ಮಹಿಳೆಯರು ತಮ್ಮ ಮಕ್ಕಳಿಗೆ ಸರಿಯಾದ ಪೌಷ್ಟಿಕ ಆಹಾರ ಮತ್ತು ನೆರೆಹೊರೆಯ ಮಕ್ಕಳ ಜೊತೆ ಬೆರೆಯದೆ ನಮ್ಮ ಮಗು ಒಂಟಿತನವನ್ನು ಅನುಭವಿಸುತ್ತಾರೆ ಎಂದು ಅಭಿಪ್ರಾಯ

ವ್ಯಕ್ತಪಡಿಸಿದ್ದಾರೆ. ಶೇ.50 ಕುರಿಗಾಹಿ ಮಹಿಳೆಯರು ಕುರಿ ಸಾಕಾಣಿಕೆ ವೃತ್ತಿ ತೃಪ್ತಿ ತಂದಿದೆ ಎಂಬ ಅಭಿಪ್ರಾಯವನ್ನು ಹೊಂದಿದ್ದಾರೆ. ಶೇ.70 ರಷ್ಟು ಮಹಿಳೆಯರು ವಲಸೆ ಸಂದರ್ಭದಲ್ಲಿ ಆಹಾರ ಸಮಸ್ಯೆ ಎದುರಾಗುತ್ತದೆ ಎಂದು ಹೇಳಿದ್ದಾರೆ. ಶೇ.40 ರಷ್ಟು ಮಹಿಳೆಯರು ವಲಸೆ ಸಂದರ್ಭದಲ್ಲಿ ನೈಸರ್ಗಿಕ ವಿಕೋಪಗಳಿಂದ ಕುಟುಂಬದ ಮೇಲೆ ಆರೋಗ್ಯ ಸಮಸ್ಯೆ ಎದುರಾಗುತ್ತದೆ ಎಂದು ಹೇಳಿದ್ದಾರೆ. ಶೇ.90ರಷ್ಟು ಕುರಿಗಾಹಿ ಮಹಿಳೆಯರು ರಾತ್ರಿ ವೇಳೆಯಲ್ಲಿ ಕುರಿಗಳ ಮೇಲೆ ನಾಯಿ ನರಿ ತೋಳ ಮತ್ತು ಕಳ್ಳರಿಂದ ತೀವ್ರ ಸಮಸ್ಯೆ ಎದುರಿಸುತ್ತೇವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಪಿತ್ರಾರ್ಜಿತ ಆಸ್ತಿಗೆ ಸಂಬಂಧಿಸಿದಂತೆ ಶೇ.6 ಮಹಿಳೆಯರು ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲುದಾರರಾಗಿದ್ದಾರೆ. ಮುಂದುವರೆದು ಶೇ.76 ಮಹಿಳೆಯರು ಮಕ್ಕಳು ನಮ್ಮಂತಾಗದೆ ಉತ್ತಮ ವಿದ್ಯಾವಂತರನ್ನಾಗಿ ಮಾಡಬೇಕೆಂಬ ಬಯಕೆಯನ್ನು ಹೊಂದಿದ್ದಾರೆ.

**ಅಧ್ಯಯನದಿಂದ ವ್ಯಕ್ತವಾದ ಅಂಶಗಳು**

1. ಕುರಿಗಾಹಿ ಮಹಿಳೆಯರ ವಲಸೆಯಿಂದ ಮಕ್ಕಳು ಪೋಷಣೆಯಿಂದ ವಂಚಿತರಾಗುತ್ತಿದ್ದಾರೆ.
2. ವಲಸೆ ಸಂದರ್ಭದಲ್ಲಿ ಆಹಾರ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ.
3. ರಾತ್ರಿ ಸಮಯದಲ್ಲಿ ಕ್ರೂರ ಪ್ರಾಣಿಗಳ ಸಮಸ್ಯೆ ಎದುರಿಸುತ್ತಿದ್ದಾರೆ.
4. ಹೆಚ್ಚಿನ ಮಹಿಳೆಯರು ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿಸಬೇಕು ಎಂಬ ಬಯಕೆಯನ್ನು ಹೊಂದಿದ್ದಾರೆ.

**ಸಲಹೆಗಳು**

1. ಕುರಿಗಾಹಿಗಳ ಅಭಿವೃದ್ಧಿಗೆ ಸರ್ಕಾರ ಸಹಾಯ ಧನ ನೀಡಬೇಕು.
2. ವಲಸೆ ಹೋಗುವ ಪ್ರದೇಶಗಳಲ್ಲಿ ತಾತ್ಕಾಲಿಕ ವಸತಿ ವ್ಯವಸ್ಥೆ ಕಲ್ಪಿಸಬೇಕು.
3. ಕ್ರೂರ ಪ್ರಾಣಿಗಳ ಸಮಸ್ಯೆ ನಿವಾರಣೆಗಾಗಿ ಸ್ಥಳೀಯ ಸಂಸ್ಥೆಗಳು ಸಹಕರಿಸಬೇಕು.

**ಸಮಾರೋಪ:**

ಪ್ರಸ್ತುತ ದಿನಮಾನದಲ್ಲಿ ಜೀವನ ನಿರ್ವಹಿಸಲು ಸತಿಪತಿ ಸಂಸಾರವನ್ನು ನಿರ್ವಹಿಸುವುದನ್ನು ನೋಡಬಹುದು ಅದರಂತೆ ಕುರಿ ಕಾಯಿಗಳು ಸಂಸಾರ ಸಮೇತರಾಗಿ ಋತು ಆಧಾರಿತ ವಲಸೆ ಹೋಗುವುದನ್ನು ಕಾಣಬಹುದು ವಲಸೆಯ ಸಂದರ್ಭದಲ್ಲಿ ಮಹಿಳೆ ಮತ್ತು ಮಕ್ಕಳ ಅನುಭವಿಸುವ ಪರಿಸ್ಥಿತಿ ಸೂಚನೆಯವಾಗಿದೆ ಮತ್ತು ಕುರಿಗಾಗಿ ಕುಟುಂಬಗಳು ಕುರಿ ಸಾಕಾಣಿಕೆಯಿಂದ ವಿಮುಕ್ತರಾಗುತ್ತಿರುವುದನ್ನು ಕಾಣುತ್ತೇವೆ.

**ಪರಾಮರ್ಶನ ಗ್ರಂಥಗಳು**


- ಚನ್ನಪ್ಪ ಕಟ್ಟಿ. (2017). *ಕುರುಬ ಮಹಿಳೆ.* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ.
- ಕಟ್ಟಿ, ಎ ಆರ್. (1990). *ಸಮಾಜಶಾಸ್ತ್ರದ ಮೂಲತತ್ವಗಳು.* ವಿಜಯ ಬುಕ್ ಡಿಪೋ.
- ಮಂಜುನಾಥ ಬೇವಿನಕಟ್ಟಿ. (2002). *ಜಾನಪದ ಕರ್ನಾಟಕ.* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ

- ಮುತ್ತಯ್ಯ, ಎಸ್ ಎಂ. (2018). *ಬುಡಕಟ್ಟು ಜ್ಞಾನ ಪರಂಪರೆ.* ದೇಶಿ ಪ್ರಕಾಶನ.
- ರಮೇಶ್ ಸ.ಚಿ. (2005). *ಅಲೆಮಾರಿಗಳ ಸ್ಥಿತಿಗತಿ.* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ.
- ರಾಜಪ್ಪ ತಳವಾಯಿ. (1993). *ಹಕ್ಕಿಪಿಕ್ಕಿಯವರ ಸಂಸ್ಕೃತಿ.* ಕರ್ನಾಟಕ ಸಾಹಿತ್ಯ ಅಕಾಡೆಮಿ.